# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:-** ವೇತನ ಶ್ರೇಣಿಗಳ ಪರಿಷ್ಕರಣೆ ಮತ್ತು ಇತರ ಸಂಬಂಧಿತ ಆದೇಶಗಳು

## ಆದೇಶ ಸಂಖ್ಯೆ: ಎಫ್‌ಡಿ 8 ಎಸ್‌ಆರ್‌ಪಿ 2007,
## ಬೆಂಗಳೂರು, ದಿನಾಂಕ 16ನೇ ಮೇ 2007

1.1 ಸರ್ಕಾರವು ತನ್ನ ಆದೇಶ ಸಂಖ್ಯೆ:ಎಫ್‌ಡಿ 8 ಎಸ್‌ಆರ್‌ಪಿ 2007, ದಿನಾಂಕ 09-04-2007 ರಲ್ಲಿ 5ನೇ ರಾಜ್ಯ ವೇತನ ಆಯೋಗವು ಶಿಫಾರಸ್ಸು ಮಾಡಿದ ಮುಖ್ಯ ಶ್ರೇಣಿ ಮತ್ತು 25 ಸ್ಥಾಯಿ ವೇತನ ಶ್ರೇಣಿಗಳನ್ನು ಒಪ್ಪಿಕೊಂಡು ಆದೇಶ ಹೊರಡಿಸಿದೆ.

1.2 ಸರ್ಕಾರವು ಈಗ ಈ ಮುಂದಿನ ಆದೇಶಗಳನ್ನು ಹೊರಡಿಸುತ್ತದೆ.

2. **ಪರಿಷ್ಕೃತ ವೇತನ ಶ್ರೇಣಿಗಳು**

2.1 ಈಗಿರುವ ವೇತನ ಶ್ರೇಣಿಗಳನ್ನು ಈ ಮುಂದೆ ನಿರ್ದಿಷ್ಟಪಡಿಸಿರುವಂತೆ ಪರಿಷ್ಕರಿಸಲಾಗಿದೆ.

| **ಕ್ರಮ ಸಂಖ್ಯೆ** | **ಈಗಿರುವ ವೇತನ ಶ್ರೇಣಿಗಳು ರೂ.** | **ಪರಿಷ್ಕೃತ ವೇತನ ಶ್ರೇಣಿಗಳು ರೂ.** |
|---|---|---|
| 1 | 2500-50-2700-75-3450-100-3850 | 4800-100-6000-125-6500-150-7100-175-7275 |
| 2 | 2600-50-2700-75-3450-100-4350 | 5200-100-6000-125-6500-150-7100-175-7800-200-8200 |
| 3 | 2775-75-3450-100-4450-125-4950 | 5500-100-6000-125-6500-150-7100-175-7800-200-8600-225-9500 |
| 4 | 3000-75-3450-100-4450-125-5450 | 5800-100-6000-125-6500-150-7100-175-7800-200-8600-225-9500-250-10500 |
| 5 | 3300-75-3450-100-4450-125-5700-150-6300 | 6250-125-6500-150-7100-175-7800-200-8600-225-9500-250-10500-300-12000 |
| 6 | 3850-100-4450-125-5700-150-7050 | 7275-175-7800-200-8600-225-9500-250-10500-300-12300-350-13350 |
| 7 | 4150-100-4450-125-5700-150-7200-200-7800 | 8000-200-8600-225-9500-250-10500-300-12300-350-14400-400-14800 |
| 8 | 4575-125-5700-150-7200-200-8400 | 8825-225-9500-250-10500-300-12300-350-14400-400-16000 |
| 9 | 5200-125-5700-150-7200-200-8800-260-9580 | 10000-250-10500-300-12300-350-14400-400-16800-450-18150 |

| | | |
|---|---|---|
| 10 | 5575–125–5700–150–7200–200–8800–260–10620 | 10800–300–12300–350–14400–400–16800–450–19500–525–20025 |
| 11 | 6000–150–7200–200–8800–260–10880–320–11200 | 11400–300–12300–350–14400–400–16800–450–19500–525–21600 |
| 12 | 6300–150–7200–200–8800–260–10880–320–11840 | 12000–300–12300–350–14400–400–16800–450–19500–525–22650 |
| 13 | 7400–200–8800–260–10880–320–13120 | 14050–350–14400–400–16800–450–19500–525–22650–600–25050 |
| 14 | 8000–200–8800–260–10880–320–13440 | 15200–400–16800–450–19500–525–22650–600–25650 |
| 15 | 9580–260–10880–320–13440–380–14200 | 18150–450–19500–525–22650–600–26250–675–26925 |
| 16 | 10620–260–10880–320–13440–380–14960 | 20025–525–22650–600–26250–675–28275 |
| 17 | 11520–320–13440–380–14960–440–15840 | 22125–525–22650–600–26250–675–30300 |
| 18 | 12800–320–13440–380–14960–440–16720 | 24450–600–26250–675–30300–750–31800 |
| 19 | 13820–380–14960–440–16720–500–17220 | 26250–675–30300–750–34800–850–36500 |
| 20 | 14960–440–16720–500–20720 | 28275–675–30300–750–34800–850–39900 |

2.2 ವೇತನ ಆಯೋಗದ ಶಿಫಾರಸ್ಸುಗಳನ್ನು ಒಪ್ಪಿಕೊಳ್ಳುತ್ತಾ, ಈ ಮುಂದಿನ ಐದು ಹೊಸ ವೇತನ ಶ್ರೇಣಿಗಳನ್ನು ದಿನಾಂಕ 01–07–2005 ರಿಂದ ಜಾರಿಗೆ ತರಲಾಗಿದೆ.

| | |
|---|---|
| 1 | 6800–150–7100–175–7800–200–8600–225–9500–250–10500–300–12300–350–13000 |
| 2 | 9500–250–10500–300–12300–350–14400–400–16800–450–17250 |
| 3 | 13000–350–14400–400–16800–450–19500–525–22650–600–23850 |
| 4 | 16400–400–16800–450–19500–525–22650–600–26250 |
| 5 | 19050–450–19500–525–22650–600–26250–675–27600 |

2.3 ಪರಿಷ್ಕೃತ ವೇತನ ಶ್ರೇಣಿಗಳು ಔದ್ಯಮಿಕ ಕೆಲಸಗಾರರ ಅಖಿಲ ಭಾರತ ಸರಾಸರಿ ಗ್ರಾಹಕ ಬೆಲೆ ಸೂಚ್ಯಂಕ (ಸಾಮಾನ್ಯ) (ಆಧಾರ ವರ್ಷ 1982=100) ಸಂಖ್ಯೆಗಳಲ್ಲಿ 524 ಅಂಶಗಳ ಸೂಚ್ಯಂಕ ಸರಾಸರಿಯಿಂದ ನಿರೂಪಿಸಲಾದ ಜೀವನ ಪರಿಸ್ಥಿತಿ ವೆಚ್ಚಕ್ಕೆ ಸಂಬಂಧಿಸಿದೆ.

2.4 ಪರಿಷ್ಕೃತ ವೇತನ ಶ್ರೇಣಿಗಳು ರೂ.4800–100–6000–125–6500–150–7100–175–7800–200–8600–225–9500–250–10500–300–12300–350–14400–400–16800–450–19500–525–

22650–600–26250–675–30300–750–34800–850–39900ರ ಮುಖ್ಯ ವೇತನ ಶ್ರೇಣಿಯ ನಿರ್ದಿಷ್ಟ ಭಾಗಗಳಾಗಿವೆ.

2.5 2005ರ ಜುಲೈ 1ರಿಂದ ಮೊದಲ್ಗೊಂಡು, ಯಾವುದೇ ಹುದ್ದೆಗೆ ಅನ್ವಯವಾಗುವ ವೇತನ ಶ್ರೇಣಿಯು ಮೇಲಿನ 2.1 ಕಂಡಿಕೆಯ (2)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿದಂತೆ ಅದಕ್ಕೆ ಅನ್ವಯವಾಗುವ ಪ್ರಸಕ್ತ ವೇತನ ಶ್ರೇಣಿಯ ಎದುರಿಗೆ ತೋರಿಸಲಾದಂತೆ ಅದೇ ಕಂಡಿಕೆಯ (3)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿದ ಪರಿಷ್ಕೃತ ವೇತನ ಶ್ರೇಣಿಯಾಗಿರತಕ್ಕದ್ದು. ಹುದ್ದೆಗಳಿಗೆ ನೂತನ ವೇತನ ಶ್ರೇಣಿಗಳ ಹಂಚಿಕೆ ಕುರಿತ ಆದೇಶಗಳನ್ನು ವೇತನ ಆಯೋಗವು ಈ ಕುರಿತು ತನ್ನ ವರದಿಯಲ್ಲಿ (2ನೇ ಸಂಪುಟ) ಮಾಡಲಿರುವ ಶಿಫಾರಸ್ಸುಗಳನ್ನು ಪರಿಶೀಲಿಸಿದ ನಂತರ ಪ್ರತ್ಯೇಕವಾಗಿ ಹೊರಡಿಸಲಾಗುವುದು.

2.6 ಕೆಲವು ಶಿಕ್ಷಕ ವರ್ಗದವರಿಗೆ ತಾತ್ಕಾಲಿಕ ಪರಿಹಾರವಾಗಿ ಮಂಜೂರು ಮಾಡಲಾಗಿರುವ ಮಾಸಿಕ ರೂ.200/–ಗಳ ವಿಶೇಷ ಭತ್ಯೆಯನ್ನು ಮುಂದಿನ ಆದೇಶಗಳವರೆಗೆ ಮುಂದುವರಿಸತಕ್ಕದ್ದು.

**೩. ಜಾರಿಗೆ ಬರುವ ದಿನಾಂಕ:**

3.1 ಪರಿಷ್ಕೃತ ವೇತನ ಶ್ರೇಣಿಗಳು 2005ರ ಜುಲೈ 1ರಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು. ವೇತನ ಶ್ರೇಣಿಗಳ ಪರಿಷ್ಕರಣೆಯ ಆರ್ಥಿಕ ಸೌಲಭ್ಯವು 1ನೇ ಏಪ್ರಿಲ್ 2006 ರಿಂದ ಲಭ್ಯವಾಗುತ್ತದೆ.

3.2 ವೇತನ ಶ್ರೇಣಿಗಳ ಪರಿಷ್ಕರಣೆಯ ಕಾರಣದಿಂದ ಆಗಿರುವ ವೇತನ ಮತ್ತು ಭತ್ಯೆಗಳ ಹಾಗೂ ನಿವೃತ್ತಿ ವೇತನದ ಹೆಚ್ಚಳವನ್ನು 1ನೇ ಏಪ್ರಿಲ್ 2007 ರಿಂದ ನಗದಾಗಿ ಸಂದಾಯ ಮಾಡತಕ್ಕದ್ದು. 1ನೇ ಏಪ್ರಿಲ್ 2006 ರಿಂದ 31ನೇ ಮಾರ್ಚ್ 2007ರ ವರೆಗಿನ ಅವಧಿಯ ವೇತನ ಮತ್ತು ಭತ್ಯೆಗಳ ಹಾಗೂ ನಿವೃತ್ತಿ ವೇತನದ ಬಾಕಿ ಮೊತ್ತವನ್ನು 2008–09ನೇ ಆರ್ಥಿಕ ವರ್ಷದಲ್ಲಿ ಸಂದಾಯ ಮಾಡಲಾಗುವುದು. ಸರ್ಕಾರಿ ಆದೇಶ ಸಂಖ್ಯೆ:ಆಇ 8 ಎಸ್ಆರ್‌ಪಿ 2007 ದಿನಾಂಕ 9–4–2007ರ ಕಂಡಿಕೆ 4ರ ಆದೇಶಗಳು ಈ ಮಟ್ಟಿಗೆ ಬದಲಾವಣೆಗೊಳ್ಳುವುದು.

**4. ಪರಿಷ್ಕೃತ ವೇತನ ಶ್ರೇಣಿಗಳಲ್ಲಿ ವೇತನ ನಿಗದಿ:**

4.1 ಸರ್ಕಾರಿ ನೌಕರನ ಪ್ರಾರಂಭಿಕ ವೇತನವನ್ನು ಸಂವಾದಿ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಈ ಮುಂದಿನ ವಿಧಾನದಲ್ಲಿ ನಿಗದಿಪಡಿಸತಕ್ಕದ್ದು.

(i) ಮೂಲ ವೇತನದ ಶೇಕಡ 17.5 ರಷ್ಟು ಮೊಬಲಗನ್ನು ಸರ್ಕಾರಿ ನೌಕರನ ಈಗಿನ 'ಉಪಲಬ್ಧಿಗೆ' ಸೇರಿಸತಕ್ಕದ್ದು. (ಇದರಲ್ಲಿ ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ 8 ಎಸ್‌ಆರ್‌ಪಿ 2006 ದಿನಾಂಕ 29–3–2006ರಲ್ಲಿ ಮಂಜೂರು ಮಾಡಿದ ಶೇಕಡ 10 ಮಧ್ಯಂತರ ಪರಿಹಾರವು ಸೇರಿರುತ್ತದೆ).

(ii) ಈಗಿನ ಉಪಲಬ್ಧಗಳಿಗೆ ಹಾಗೆ ಸೇರಿಸಿ ಹೆಚ್ಚಿಸಿದ ಆನಂತರ ಈಗಿನ ಮೂಲ ವೇತನವನ್ನು ಸಂವಾದಿ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಈ ಮುಂದಿನಂತೆ ನಿಗದಿಪಡಿಸತಕ್ಕದ್ದು.

(ಎ) ಹಾಗೆ ಮೇಲಿನಂತೆ ಲೆಕ್ಕ ಹಾಕಲಾದ ಒಟ್ಟು ಮೊಬಲಗು ಪರಿಷ್ಕೃತ ವೇತನ ಶ್ರೇಣಿಯ ಕನಿಷ್ಟಕ್ಕಿಂತಲೂ ಕಡಿಮೆಯಾದಲ್ಲಿ ವೇತನವನ್ನು ಕನಿಷ್ಟಕ್ಕೆ ನಿಗದಿಪಡಿಸತಕ್ಕದ್ದು.

(ಬಿ) ಮೇಲಿನಂತೆ ಲೆಕ್ಕ ಹಾಕಲಾದ ಮೊಬಲಗು ಕನಿಷ್ಟಕ್ಕಿಂತಲೂ ಕಡಿಮೆ ಇಲ್ಲದಿದ್ದಲ್ಲಿ ಆದರೆ ಪರಿಷ್ಕೃತ ವೇತನ ಶ್ರೇಣಿಯ ಗರಿಷ್ಠಕ್ಕಿಂತಲೂ ಕಡಿಮೆಯಾದಲ್ಲಿ ವೇತನವನ್ನು ಪರಿಷ್ಕೃತ ವೇತನ ಶ್ರೇಣಿಯಲ್ಲಿ ಮೇಲಿನ ಮೊಬಲಗಿನ ಆನಂತರದ ಹಂತದಲ್ಲಿ ನಿಗದಿಪಡಿಸತಕ್ಕದ್ದು; ಮತ್ತು

(ಸಿ) ಮೇಲಿನಂತೆ ಲೆಕ್ಕ ಹಾಕಲಾದ ಮೊಬಲಗು ಪರಿಷ್ಕೃತ ವೇತನ ಶ್ರೇಣಿಯ ಗರಿಷ್ಠಕ್ಕೆ ಸಮನಾಗಿದ್ದಲ್ಲಿ, ಅಥವಾ ಅದಕ್ಕಿಂತಲೂ ಹೆಚ್ಚಾದಲ್ಲಿ, ವೇತನವನ್ನು ಆ ಗರಿಷ್ಠಕ್ಕೆ ನಿಗದಿಪಡಿಸತಕ್ಕದ್ದು ಮತ್ತು ಹೀಗೆ ಲೆಕ್ಕ ಹಾಕಿ ಬಂದ ಮೊತ್ತದ ಆನಂತರದ ಮುಖ್ಯ ಶ್ರೇಣಿಯಲ್ಲಿನ ಹಂತ ಕಂಡಿಕೆ 2.3 ರಲ್ಲಿ ಸೂಚಿಸಿರುವ ಮತ್ತು ಗರಿಷ್ಠ ಹಂತ–ಇವುಗಳ ನಡುವಣ ವ್ಯತ್ಯಾಸದ ಮೊತ್ತವನ್ನು ಆತನ ವೈಯಕ್ತಿಕ ವೇತನವೆಂದು ಪರಿಗಣಿಸತಕ್ಕದ್ದು.

ಈ ಉದ್ದೇಶಕ್ಕಾಗಿ ‘ಈಗಿನ ಉಪಲಬ್ಧಗಳು’ ಈ ಕೆಳಗಿನವುಗಳನ್ನು ಒಳಗೊಂಡಿರುತ್ತದೆ.

(ಎ) 2007ರ ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳ ನಿಯಮ 3ರ ಖಂಡ (ಎ) ಯಲ್ಲಿ ವ್ಯಾಖ್ಯಾನಿಸಿದ ಮೂಲ ವೇತನ.

(ಬಿ) ದಿನಾಂಕ 28ನೇ ಅಕ್ಟೋಬರ್ 2005ರ ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 48 ಎಸ್‌ಆರ್‌ಪಿ 2005 ರಲ್ಲಿ ಮೂಲ ವೇತನಕ್ಕೆ ನಿಗದಿಗೊಳಿಸಲಾದ ತುಟ್ಟಿಭತ್ಯೆಯ ದರ.

4.2 ಪ್ರಸಕ್ತ ವೇತನ ಶ್ರೇಣಿಯಲ್ಲಿನ ಹಂತಗಳನ್ನು ಮತ್ತು ಪರಿಷ್ಕೃತ ವೇತನ ಶ್ರೇಣಿಯಲ್ಲಿ ನಿಗದಿಪಡಿಸಬೇಕಾದ ವೇತನವನ್ನು ತೋರಿಸುವ ಹೊಂದಿಕೆ ಕೋಷ್ಠಕವನ್ನು ನಾಲ್ಕನೇ ಅನುಸೂಚಿಯಾಗಿ 2007ರ ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳಿಗೆ ಅನುಬಂಧಿಸಲಾಗಿದೆ.

4.3 ಸರ್ಕಾರಿ ನೌಕರನಿಗೆ ಅನ್ವಯವಾಗುವ ಪರಿಷ್ಕೃತ ಶ್ರೇಣಿಯಲ್ಲಿ ವೇತನವನ್ನು ಪಡೆಯಲು ಅವನು ಆಯ್ಕೆ ಚಲಾಯಿಸುವ ಅಗತ್ಯವಿಲ್ಲ. 1ನೇ ಜುಲೈ 2005 ರಂದು ಸೇವೆಯಲ್ಲಿದ್ದಂಥ ಪ್ರತಿಯೊಬ್ಬ ಸರ್ಕಾರಿ ನೌಕರನ ಪ್ರಾರಂಭಿಕ ವೇತನವನ್ನು ಸದರಿ ನಿಯಮಗಳ ನಾಲ್ಕನೇ ಅನುಸೂಚಿಯ 1ನೇ ಅಂಕಣದಲ್ಲಿ ಕಂಡುಬರುವ ಪ್ರಸಕ್ತ ವೇತನ ಶ್ರೇಣಿಯಲ್ಲಿನ ಆತನ ಮೂಲ ವೇತನಕ್ಕೆ ಸಂವಾದಿಯಾಗಿ ಅದರ 2ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿರುವ ಹಂತದಲ್ಲಿ ನಿಗದಿಪಡಿಸತಕ್ಕದ್ದು.

4.4 ವೇತನ ಬಡ್ತಿಯು (ಸ್ಥಗಿತ ವೇತನ ಬಡ್ತಿಯು ಸೇರಿದಂತೆ) 1ನೇ ಜುಲೈ 2005 ರಿಂದ 30ನೇ ಜೂನ್ 2006ರ ವರೆಗಿನ ಅವಧಿಯಲ್ಲಿ ಸಾಮಾನ್ಯ ಕ್ರಮದಲ್ಲಿ ಪ್ರಸಕ್ತ ವೇತನ ಶ್ರೇಣಿಯಲ್ಲಿ ಸರ್ಕಾರಿ

ನೌಕರನಿಗೆ ಪ್ರಾಪ್ತವಾಗುವಂತಿದ್ದರೆ, ಅದು ಆತನಿಗೆ ಅನುಕೂಲವಾಗುವಂತಿದ್ದರೆ, ಪರಿಷ್ಕೃತ ವೇತನ ಶ್ರೇಣಿಯಲ್ಲಿನ ಆತನ ವೇತನವನ್ನು 2007ರ ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳ ನಿಯಮ 8ರ ಉಪ-ನಿಯಮ (1)ರ ಪರಂತುಕದ ಉಪಬಂಧಗಳಿಗನುಸಾರವಾಗಿ, ಅಂಥ ವೇತನ ಬಡ್ತಿಯು ಪ್ರಾಪ್ತವಾಗುವ ದಿನಾಂಕದಿಂದ ಪುನರ್ ನಿಗದಿಪಡಿಸತಕ್ಕದ್ದು.

4.5 1ನೇ ಜುಲೈ 2005 ರಂದು ಅಥವಾ ಆನಂತರ ಸೇವೆಗೆ ಸೇರಿರುವ ಅಥವಾ 1ನೇ ಜುಲೈ 2005 ಕ್ಕೆ ಮೊದಲು ತಾನು ಧಾರಣ ಮಾಡಿರುವ ಹುದ್ದೆಯಲ್ಲದೆ ಇತರ ಯಾವುದೇ ಹುದ್ದೆಗೆ ಬಡ್ತಿ ಹೊಂದಿರುವ ಅಥವಾ ನೇಮಕ ಹೊಂದಿರುವ ಸರ್ಕಾರಿ ನೌಕರನ ವೇತನವನ್ನು ಕರ್ನಾಟಕ ನಾಗರಿಕ ಸೇವಾ ನಿಯಮಗಳ ಉಪಬಂಧಗಳಿಗನುಸಾರವಾಗಿ ನಿಗದಿ ಪಡಿಸತಕ್ಕದ್ದು. ಅಂಥ ಪ್ರಕರಣಗಳಲ್ಲಿ 2007ರ ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳ ಮೇರೆಗೆ "ಹೊಂದಿಕೆ ಪ್ರಯೋಜನ" ದೊರೆಯುವುದಿಲ್ಲ.

4.6 ಪರಿಷ್ಕೃತ ವೇತನ ಶ್ರೇಣಿಗಳಲ್ಲಿ ಮಾಡಿರುವ ವೇತನ ನಿಗದೀಕರಣದ ಕೆಲವು ಉದಾಹರಣೆಗಳನ್ನು ಈ ಆದೇಶದ ಅನುಬಂಧ-I ರಲ್ಲಿ ಕೊಡಲಾಗಿದೆ.

**5. ಪರಿಷ್ಕೃತ ಶ್ರೇಣಿಯಲ್ಲಿ ವೇತನ ಪಡೆಯಲು ಅಧಿಕಾರ ನೀಡಿಕೆ:**

5.1 ಕಛೇರಿಗಳ ಮುಖ್ಯಾಧಿಕಾರಿಗಳು ತಮ್ಮ ನಿಯಂತ್ರಣದಲ್ಲಿರುವ ಸರ್ಕಾರಿ ನೌಕರರ ವೇತನವನ್ನು 2007ರ ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳೊಂದಿಗೆ ಓದಿಕೊಳ್ಳಲಾದ 'ಹೊಂದಿಕೆ ಕೋಷ್ಠಕ'ಕ್ಕೆ ಅನುಸಾರವಾಗಿ ನಿಗದಿಪಡಿಸಲು ಸಕ್ಷಮರಾಗಿರತಕ್ಕದ್ದು.

5.2 ಯಾವ ಸರ್ಕಾರಿ ನೌಕರರ ವೇತನವು ಮಹಾಲೇಖಪಾಲರಿಂದ ಅಧಿಕೃತಗೊಳಿಸಲಾಗುವುದೋ ಆ ಸರ್ಕಾರಿ ನೌಕರರ ಸಂಬಂಧದಲ್ಲಿ ಅವರ ವೇತನವನ್ನು ಮಹಾಲೇಖಪಾಲರು ನಿಗದಿಪಡಿಸತಕ್ಕದ್ದು.

5.3 ಈ ಆದೇಶದ ಅನುಬಂಧ-II ರಲ್ಲಿ ಕೊಡಲಾದ ನಮೂನೆಯಲ್ಲಿ ಪರಿಷ್ಕೃತ ವೇತನ ಶ್ರೇಣಿಗಳಲ್ಲಿ ವೇತನ ನಿಗದಿ ಮಾಡತಕ್ಕದ್ದು. ಈ ನಮೂನೆಯ ಒಂದು ಪ್ರತಿಯನ್ನು ಸರ್ಕಾರಿ ನೌಕರನ ಸೇವಾ ಪುಸ್ತಕದಲ್ಲಿ ಅಂಟಿಸತಕ್ಕದ್ದು; ಒಂದು ಪ್ರತಿಯನ್ನು ಸರ್ಕಾರಿ ನೌಕರನ ವೇತನವನ್ನು ಪರಿಷ್ಕೃತ ವೇತನ ಶ್ರೇಣಿಯಲ್ಲಿ ಪ್ರಥಮ ಬಾರಿಗೆ ಪಡೆಯುವ ಸಂಬಳದ ಬಿಲ್ಲಿಗೆ ಲಗತ್ತಿಸತಕ್ಕದ್ದು ಮತ್ತು ಒಂದು ಪ್ರತಿಯನ್ನು ಸಂಬಂಧಪಟ್ಟ ಇಲಾಖಾ ಮುಖ್ಯಾಧಿಕಾರಿಗೆ ಕಳುಹಿಸತಕ್ಕದ್ದು.

5.4 ಸರ್ಕಾರಿ ನೌಕರರ ವೇತನವನ್ನು ಪರಿಷ್ಕೃತ ವೇತನ ಶ್ರೇಣಿಯಲ್ಲಿ ಬಹಳ ತ್ವರಿತವಾಗಿ ಮತ್ತು 30ನೇ ಜೂನ್ 2007 ರೊಳಗಾಗಿ ನಿಗದಿಪಡಿಸುವಂತೆ ಕಛೇರಿ ಮುಖ್ಯಸ್ಥರು ಖಚಿತಪಡಿಸಿಕೊಳ್ಳಬೇಕು.

**6. ತುಟ್ಟಿ ಭತ್ಯೆ:**

6.1 ಸರ್ಕಾರಿ ನೌಕರರಿಗೆ ಸಂದಾಯವಾಗಬೇಕಾದ ತುಟ್ಟಿಭತ್ಯೆಯನ್ನು ಕೇಂದ್ರ ಸರ್ಕಾರವು ರೂಪಿಸಿರುವ ತುಟ್ಟಿಭತ್ಯೆಯ ನೀತಿಗೆ ಅನುಗುಣವಾಗಿ ಕ್ರಮಬದ್ಧಗೊಳಿಸತಕ್ಕದ್ದು.

6.2 ಇದನ್ನು ಪ್ರತಿವರ್ಷ ಎರಡು ಸಾರಿ ಅಂದರೆ, 1ನೇ ಜನವರಿ ಮತ್ತು 1ನೇ ಜುಲೈ ರಂದು ಪಾವತಿಸತಕ್ಕದ್ದು. ದಿನಾಂಕ 1-4-2006 ರಿಂದ ಪರಿಷ್ಕೃತ ವೇತನ ಶ್ರೇಣಿಗಳಲ್ಲಿ ಸರ್ಕಾರಿ ನೌಕರರಿಗೆ ಸಂದಾಯ ಮಾಡಬೇಕಾದ ತುಟ್ಟಿಭತ್ಯೆಯನ್ನು ಕೇಂದ್ರ ಸರ್ಕಾರವು ಮಂಜೂರು ಮಾಡುವ ತುಟ್ಟಿಭತ್ಯೆಯ ಪ್ರತಿ ಶೇಕಡಾ 1 ರಷ್ಟು ಹೆಚ್ಚಳಕ್ಕೆ 0.875 ಪರಿವರ್ತಿತ ಅಪವರ್ತ್ಯ ಗುಣಾಕಾರ ಅಂಶದಷ್ಟು (multiplication factor) ಲೆಕ್ಕಾಚಾರ ಮಾಡತಕ್ಕದ್ದು.

6.3 ಹಣದುಬ್ಬರದ ತಟಸ್ಥೀಕರಣ ಎಲ್ಲಾ ಹಂತಗಳಲ್ಲಿ ಶೇಕಡಾ 100ರಷ್ಟು ಏಕರೂಪವಾಗಿರತಕ್ಕದ್ದು.

6.4 ತುಟ್ಟಿಭತ್ಯೆಯನ್ನು ಸಂಭಾವನೆಯ ವಿಶಿಷ್ಟ ಅಂಶವಾಗಿ ಕಾಣಿಸುವುದನ್ನು ಮುಂದುವರಿಸಲಾಗುವುದು.

**7. ಕಾಲಬದ್ಧ ಬಡ್ತಿ/ಹಿರಿಯ ವೇತನ ಶ್ರೇಣಿಗೆ ಸ್ವಯಂಚಾಲಿತ ವಿಶೇಷ ಮುಂಬಡ್ತಿ:**

7.1 ಕಾಲಬದ್ಧ ಬಡ್ತಿ/ಹಿರಿಯ ವೇತನ ಶ್ರೇಣಿಗೆ ಸ್ವಯಂಚಾಲಿತ ವಿಶೇಷ ಮುಂಬಡ್ತಿ ನೀಡುವಿಕೆಯ ಈಗಿರುವ ಯೋಜನೆಗಳು ಈ ಮುಂದಿನ ಕಂಡಿಕೆಗಳಲ್ಲಿ ಸೂಚಿಸಿರುವ ಮಾರ್ಪಾಡಿನೊಂದಿಗೆ ಮುಂದಿನ ಆದೇಶಗಳವರೆಗೆ ಜಾರಿಯಲ್ಲಿ ಮುಂದುವರಿಯುವುದು.

7.2 ಐದು ನೂತನ ವೇತನ ಶ್ರೇಣಿಗಳ ಅಳವಡಿಕೆಯಿಂದಾಗಿ ಮೊದಲ 14 ವೇತನ ಶ್ರೇಣಿಗಳಲ್ಲಿ ಹುದ್ದೆಗಳನ್ನು ಧಾರಣ ಮಾಡಿರುವ ಸರ್ಕಾರಿ ನೌಕರರು 1ನೇ ಜುಲೈ 2005 ರಿಂದ ಜಾರಿಗೆ ಬರುವಂತೆ 1983ರ ಕರ್ನಾಟಕ ನಾಗರಿಕ ಸೇವಾ (ಕಾಲಬದ್ಧ ಬಡ್ತಿ) ನಿಯಮಗಳಡಿ ಆಯ್ಕೆಕಾಲಿಕ ವೇತನ ಶ್ರೇಣಿ ಮತ್ತು 1991ರ ಕರ್ನಾಟಕ ನಾಗರಿಕ ಸೇವಾ (ಹಿರಿಯ ವೇತನ ಶ್ರೇಣಿಗೆ ಸ್ವಯಂಚಾಲಿತ ವಿಶೇಷ ಮುಂಬಡ್ತಿ ನೀಡುವಿಕೆ) ನಿಯಮಗಳಡಿ ಹಿರಿಯ ವೇತನ ಶ್ರೇಣಿ ಸೌಲಭ್ಯಕ್ಕೆ ಅರ್ಹರಾಗುತ್ತಾರೆ.

7.3 1ನೇ ಜುಲೈ 2005 ರಿಂದ ಜಾರಿಗೆ ಬರುವಂತೆ, 1983ರ ಕರ್ನಾಟಕ ನಾಗರಿಕ ಸೇವಾ (ಕಾಲಬದ್ಧ ಬಡ್ತಿ) ನಿಯಮಗಳಿಗೆ ಅನುಸಾರವಾಗಿ ಒಂದು ಹುದ್ದೆಯನ್ನು ಧಾರಣ ಮಾಡಿರುವ ಸರ್ಕಾರಿ ನೌಕರನಿಗೆ ಲಭ್ಯವಾಗುವ ಆಯ್ಕೆ ಕಾಲಿಕ ವೇತನ ಶ್ರೇಣಿಯು ಕೆಳಗೆ ಅಂಕಣ (2)ರಲ್ಲಿ ನಿರ್ದಿಷ್ಟಪಡಿಸಲಾದಂತೆ ಅನ್ವಯವಾಗುವ ಪರಿಷ್ಕೃತ ವೇತನ ಶ್ರೇಣಿಯ ಎದುರಿಗೆ ಅಂಕಣ (3)ರಲ್ಲಿ ನಿರ್ದಿಷ್ಟಪಡಿಸಲಾದ ಪರಿಷ್ಕೃತ ಆಯ್ಕೆ ಕಾಲಿಕ ವೇತನ ಶ್ರೇಣಿಯಾಗಿರತಕ್ಕದ್ದು. ಪರಂತು, ಐದು ನೂತನ ವೇತನ ಶ್ರೇಣಿಗಳನ್ನು ಜಾರಿಗೆ ತಂದಿರುವುದರಿಂದ, 1999ರ ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳಡಿ ವೇತನ ಶ್ರೇಣಿಯನ್ನು ಹೊಂದಿರುವ ಹುದ್ದೆಯಲ್ಲಿ ಧಾರಣ ಮಾಡಿರುವ ಒಬ್ಬ ಸರ್ಕಾರಿ ನೌಕರನಿಗೆ ಕಾಲಮಿತಿ ವೇತನ ಬಡ್ತಿಯನ್ನು ದಿನಾಂಕ 01-07-2005ರ ಪೂರ್ವದಲ್ಲಿ 1983ರ ಕರ್ನಾಟಕ ನಾಗರಿಕ ಸೇವಾ (ಕಾಲಬದ್ಧ ಬಡ್ತಿ) ನಿಯಮಗಳಡಿ ಕೆಳಗಿನ ಅಂಕಣ (3) ರಲ್ಲಿ ಸೂಚಿಸಿರುವ ಆಯ್ಕೆ ಕಾಲಿಕ ವೇತನ ಶ್ರೇಣಿಗಿಂತ ಹೆಚ್ಚಿನ ಆಯ್ಕೆಕಾಲಿಕ ವೇತನ ಶ್ರೇಣಿಯನ್ನು ಮಂಜೂರು ಮಾಡಿದ್ದಲ್ಲಿ ಪ್ರಸ್ತುತ ಆಯ್ಕೆಕಾಲಿಕ ವೇತನ ಶ್ರೇಣಿಗೆ ಸಂವಾದಿಯಾದ ಪರಿಷ್ಕೃತ ವೇತನ ಶ್ರೇಣಿಯನ್ನು ಅವನಿಗೆ ವೈಯಕ್ತಿಕವಾಗಿ ನೀಡತಕ್ಕದ್ದು.

| ಕ್ರಮ ಸಂಖ್ಯೆ | ವೇತನ ಶ್ರೇಣಿ ರೂ. | ಆಯ್ಕೆಕಾಲಿಕ ವೇತನ ಶ್ರೇಣಿ ರೂ. |
|---|---|---|
| 1 | 2 | 3 |
| 1 | 4800−7275 | 5200−8200 |
| 2 | 5200−8200 | 5500−9500 |
| 3 | 5500−9500 | 5800−10500 |
| 4 | 5800−10500 | 6250−12000 |
| 5 | 6250−12000 | 6800−13000 |
| 6 | 6800−13000 | 7275−13350 |
| 7 | 7275−13350 | 8000−14800 |
| 8 | 8000−14800 | 8825−16000 |
| 9 | 8825−16000 | 9500−17250 |
| 10 | 9500−17250 | 10000−18150 |
| 11 | 10000−18150 | 10800−20025 |
| 12 | 10800−20025 | 11400−21600 |
| 13 | 11400−21600 | 12000−22650 |
| 14 | 12000−22650 | 13000−23850 |

7.4 1ನೇ ಜುಲೈ 2005 ರಿಂದ ಜಾರಿಗೆ ಬರುವಂತೆ, ಒಂದು ಹುದ್ದೆಯನ್ನು ಧಾರಣ ಮಾಡಿರುವ ಸರ್ಕಾರಿ ನೌಕರನಿಗೆ 1991ರ ಕರ್ನಾಟಕ ನಾಗರಿಕ ಸೇವಾ (ಹಿರಿಯ ವೇತನ ಶ್ರೇಣಿಗೆ ಸ್ವಯಂ ಚಾಲಿತ ವಿಶೇಷ ಮುಂಬಡ್ತಿ ನೀಡುವಿಕೆ) ನಿಯಮಗಳಿಗೆ ಅನುಸಾರವಾಗಿ, ದೊರೆಯುವ ಹಿರಿಯ ವೇತನ ಶ್ರೇಣಿಯು 1983 ರ ಕರ್ನಾಟಕ ನಾಗರಿಕ ಸೇವಾ (ಕಾಲಬದ್ಧ ಬಡ್ತಿ) ನಿಯಮಗಳ ಮೇರೆಗೆ ಮಂಜೂರು ಮಾಡಿದ ಪರಿಷ್ಕೃತ ಆಯ್ಕೆ ಕಾಲಿಕ ಶ್ರೇಣಿಯ ನಂತರದ ಪರಿಷ್ಕೃತ ವೇತನ ಶ್ರೇಣಿ ಆಗಿರುತ್ತದೆ ಅಥವಾ ಸರ್ಕಾರಿ ನೌಕರನು ಧಾರಣ ಮಾಡಿರುವ ಹುದ್ದೆಗೆ ಅನ್ವಯವಾಗುವಂತೆ 1983ರ ಕರ್ನಾಟಕ ನಾಗರಿಕ ಸೇವಾ (ಕಾಲಬದ್ಧ ಬಡ್ತಿ) ನಿಯಮಗಳಡಿ ಮಂಜೂರಾದ ಪರಿಷ್ಕೃತ ಆಯ್ಕೆಕಾಲಿಕ ವೇತನ ಶ್ರೇಣಿ ಮತ್ತು ಪದೋನ್ನತಿ ಹುದ್ದೆಯ ವೇತನ ಶ್ರೇಣಿ ಒಂದೇ ಆಗಿದ್ದಲ್ಲಿ ಅಥವಾ ಸರಿಸಮಾನವಾಗಿದ್ದಲ್ಲಿ, ಅಂತಹ ಮುಂಬಡ್ತಿ ಹುದ್ದೆಯ ಪರಿಷ್ಕೃತ ವೇತನ ಶ್ರೇಣಿ ಆಗಿರುತ್ತದೆ.

7.5 1ನೇ ಜುಲೈ 2005ರ ಮುಂಚೆ 1983ರ ಕರ್ನಾಟಕ ನಾಗರಿಕ ಸೇವಾ (ಕಾಲಬದ್ಧ ಬಡ್ತಿ) ನಿಯಮಗಳು ಅಥವಾ 1991ರ ಕರ್ನಾಟಕ ನಾಗರಿಕ ಸೇವಾ (ಹಿರಿಯ ವೇತನ ಶ್ರೇಣಿಗೆ ಸ್ವಯಂಚಾಲಿತ ವಿಶೇಷ ಮುಂಬಡ್ತಿ ನೀಡುವಿಕೆ) ನಿಯಮಗಳ ಮತ್ತು ಸಂಬಂಧಿಸಿದ ಆದೇಶಗಳಿಗನುಸಾರವಾಗಿ, ಆಯಾ ಪ್ರಕರಣಕ್ಕನುಸಾರವಾಗಿ, ಆಯ್ಕೆ ಕಾಲಿಕ ವೇತನ ಶ್ರೇಣಿ ಅಥವಾ ಹಿರಿಯ ವೇತನ ಶ್ರೇಣಿಯನ್ನು ಮಂಜೂರು ಮಾಡಿರುವ ಸರ್ಕಾರಿ ನೌಕರನ ಪ್ರಾರಂಭಿಕ ವೇತನವನ್ನು 4.1 ರಿಂದ 4.3 ರವರೆಗಿನ ಕಂಡಿಕೆಗಳಲ್ಲಿ ನಮೂದಿಸಿದಂತೆ ಸಂವಾದಿ ಪರಿಷ್ಕೃತ ವೇತನ ಶ್ರೇಣಿಯಲ್ಲಿ ನಿಗದಿಪಡಿಸತಕ್ಕದ್ದು.

7.6 1ನೇ ಜುಲೈ 2005 ರಂದು ಅಥವಾ ಆನಂತರ, 1983ರ ಕರ್ನಾಟಕ ನಾಗರಿಕ ಸೇವಾ (ಕಾಲಬದ್ಧ ಬಡ್ತಿ) ನಿಯಮಗಳ ಅಥವಾ 1991ರ ಕರ್ನಾಟಕ ನಾಗರಿಕ ಸೇವಾ (ಹಿರಿಯ ವೇತನ ಶ್ರೇಣಿಗೆ ಸ್ವಯಂಚಾಲಿತ ವಿಶೇಷ ಮುಂಬಡ್ತಿ ನೀಡುವಿಕೆ) ನಿಯಮಗಳು ಮತ್ತು ಸಂಬಂಧಿಸಿದ ಆದೇಶಗಳಿಗನುಸಾರವಾಗಿ, ಆಯಾ ನಿಯಮಗಳಿಗನುಸಾರವಾಗಿ, ಆಯ್ಕೆಕಾಲಿಕ ವೇತನ ಶ್ರೇಣಿ ಅಥವಾ ಹಿರಿಯ ವೇತನ ಶ್ರೇಣಿಗೆ ಅರ್ಹತೆ ಪಡೆಯುವ ಸರ್ಕಾರಿ ನೌಕರನ ವೇತನವನ್ನು ಸಂಬಂಧಿಸಿದ ನಿಯಮಗಳಲ್ಲಿ ವಿಧಿಸಲಾದಂತೆ ಪರಿಷ್ಕೃತ ಆಯ್ಕೆ ಕಾಲಿಕ ವೇತನ ಶ್ರೇಣಿ ಅಥವಾ ಹಿರಿಯ ವೇತನ ಶ್ರೇಣಿಯಲ್ಲಿ ನಿಗದಿಪಡಿಸತಕ್ಕದ್ದು.

**೮. ನಿವೃತ್ತಿ ವೇತನ ಸೌಲಭ್ಯಗಳು:**

8.1 1ನೇ ಜುಲೈ 2005ರ ನಂತರ, ಆದರೆ 1ನೇ ಏಪ್ರಿಲ್ 2006ಕ್ಕಿಂತ ಮುಂಚೆ ಸೇವೆಯಿಂದ ನಿವೃತ್ತನಾದ ಅಥವಾ ಸೇವೆಯಲ್ಲಿರುವಾಗಲೇ ಮೃತನಾದ ಕಾರಣದಿಂದ ಸೇವೆಯಲ್ಲಿರುವುದು ಕೊನೆಗೊಂಡ ಸರ್ಕಾರಿ ನೌಕರನ ಪ್ರಕರಣದಲ್ಲಿ ಪರಿಷ್ಕೃತ ವೇತನ ಶ್ರೇಣಿಗಳಲ್ಲಿ ಕಾಲ್ಪನಿಕವಾಗಿ ನಿಗದಿಪಡಿಸಲಾದ ವೇತನವನ್ನು ನಿವೃತ್ತಿ ವೇತನ/ ಕುಟುಂಬ ನಿವೃತ್ತಿ ವೇತನವನ್ನು ಲೆಕ್ಕ ಹಾಕುವ ಉದ್ದೇಶಗಳಿಗಾಗಿ ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದು. ಆದರೆ, ಆರ್ಥಿಕ ಸೌಲಭ್ಯವು ನಿವೃತ್ತನಾದ ಸರ್ಕಾರಿ ನೌಕರನಿಗೆ ಅಥವಾ ಮರಣ ಹೊಂದಿದ ಸರ್ಕಾರಿ ನೌಕರರ ಫಲಾನುಭವಿಗೆ ದಿನಾಂಕ 01-04-2006 ರಿಂದ ಪ್ರಾಪ್ತವಾಗತಕ್ಕದ್ದು. ಆದರೆ, ಈ ಹೆಚ್ಚಳದ ಬಾಕಿಯನ್ನು 2008-09 ರ ಆರ್ಥಿಕ ವರ್ಷದಲ್ಲಿ ನಗದಾಗಿ ಸಂದಾಯ ಮಾಡತಕ್ಕದ್ದು.

**೯. ಮನೆ ಬಾಡಿಗೆ ಭತ್ಯೆ / ನಗರ ಪರಿಹಾರ ಭತ್ಯೆ / ಗ್ರಾಮೀಣ ಭತ್ಯೆ:**

9.1 ಹಾಲಿ ಜಾರಿಯಲ್ಲಿರುವ ಆದೇಶಗಳಂತೆ ಮುಂದಿನ ಆದೇಶದವರೆಗೆ ಮನೆ ಬಾಡಿಗೆ ಭತ್ಯೆ ಮತ್ತು ನಗರ ಪರಿಹಾರ ಭತ್ಯೆಯ ಉದ್ದೇಶಕ್ಕಾಗಿ ವರ್ಗೀಕರಿಸಿದ ಪಟ್ಟಣಗಳು ಮತ್ತು ಇತರೆ ಸ್ಥಳಗಳು ಚಾಲ್ತಿಯಲ್ಲಿರುತ್ತದೆ. ಮನೆ ಬಾಡಿಗೆ ಭತ್ಯೆಯ ಪಾವತಿಯನ್ನು ಹಾಲಿ ಜಾರಿಯಲ್ಲಿರುವ ಆದೇಶಗಳಂತೆ ಕ್ರಮಬದ್ಧಗೊಳಿಸಲಾಗುವುದು. ಆದರೆ, 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ' ಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ನೌಕರರು ಹಾಲಿ ಜಾರಿಯಲ್ಲಿರುವ ಶೇಕಡ 13ರ ದರದ ಬದಲಾಗಿ ಶೇಕಡ 15ರ ದರದಲ್ಲಿ ಮನೆ ಬಾಡಿಗೆ ಭತ್ಯೆಗೆ ದಿನಾಂಕ 01-04-2006 ರಿಂದ ಅರ್ಹರಾಗುತ್ತಾರೆ.

9.2 ಸರ್ಕಾರಿ ನೌಕರರಿಗೆ ನಗರ ಪರಿಹಾರ ಭತ್ಯೆಯು ದಿನಾಂಕ 01-04-2006 ರಿಂದ ಈ ಕೆಳಗಿನ ದರದಲ್ಲಿ ದೊರೆಯುತ್ತದೆ:

| **ವೇತನದ ಹಂತ(ಮೂಲ ವೇತನ) ಪರಿಷ್ಕೃತ ವೇತನ ಶ್ರೇಣಿಗಳಲ್ಲಿ** | **ವರ್ಗೀಕೃತ ನಗರಗಳಲ್ಲಿ ನಗರ ಪರಿಹಾರ ಭತ್ಯೆಯ ಮೊತ್ತ (ರೂ. ತಿಂಗಳಿಗೆ)** | | |
|---|---|---|---|
| | **ಎ** | **ಬಿ1** | **ಬಿ2** |
| ಮೂಲ ವೇತನ ತಿಂಗಳಿಗೆ ರೂ.4800 ರಿಂದ ರೂ.7799 | 150 | 100 | 80 |
| ಮೂಲ ವೇತನ ತಿಂಗಳಿಗೆ ರೂ.7800 ಮತ್ತು ಮೇಲ್ಪಟ್ಟು | 300 | 200 | 80 |

9.3 25,000 ಕ್ಕಿಂತಲೂ ಕಡಿಮೆ ಜನಸಂಖ್ಯೆಯಿರುವ ಮತ್ತು ಮನೆ ಬಾಡಿಗೆ ಭತ್ಯೆ ಮತ್ತು ನಗರ ಪರಿಹಾರ ಭತ್ಯೆಗಳಿಗೆ 'ಇ' ವರ್ಗವೆಂದು ಘೋಷಿಸಿರುವ ಗ್ರಾಮೀಣ ಪ್ರದೇಶಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸರ್ಕಾರಿ ನೌಕರರು ದಿನಾಂಕ 01-04-2006 ರಿಂದ ಜಾರಿಗೆ ಬರುವಂತೆ ಮಾಸಿಕ ರೂ.100/- ಗಳ ಗ್ರಾಮೀಣ ಭತ್ಯೆಯನ್ನು ಪಡೆಯಲು ಅರ್ಹರಾಗಿರುತ್ತಾರೆ.

**10. ಇತರ ವಿಷಯಗಳು:**

10.1 1958ರ ಕರ್ನಾಟಕ ಸರ್ಕಾರಿ ನೌಕರರ (ಕಡ್ಡಾಯ ಜೀವ ವಿಮೆ) ನಿಯಮಗಳ ಮೇರೆಗೆ ವಿಮಾ ಕಂತಿನ ಕನಿಷ್ಟ ದರಗಳನ್ನು ಸಹ, ಪರಿಷ್ಕೃತ ವೇತನ ಶ್ರೇಣಿಯ ಸರಾಸರಿಯ ಶೇಕಡಾ ಆರೂ ಕಾಲು (ಶೇ. 6¼) ಆಗಿರುವಂತೆ 1ನೇ ಏಪ್ರಿಲ್ 2007 ರಿಂದ ಜಾರಿಗೆ ಬರುವಂತೆ ಪರಿಷ್ಕರಿಸಲಾಗಿದೆ.

10.2 ಪ್ರಯಾಣ ಭತ್ಯೆಯ ಪರಿಷ್ಕರಣೆಯನ್ನು ಮತ್ತು ಅರ್ಹತೆ ಕುರಿತು ಆದೇಶಗಳನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು.

10.3 ಈ ಆದೇಶಗಳನ್ನು ಕಾರ್ಯಗತಗೊಳಿಸುವಲ್ಲಿ ಯಾವುದೇ ಸಮಸ್ಯೆಗಳಿದ್ದರೆ ಅಥವಾ ಯಾವುದೇ ಸಂದೇಹಗಳಿಗೆ ಸ್ಪಷ್ಟೀಕರಣದ ಅವಶ್ಯಕತೆ ಕಂಡು ಬಂದರೆ, ಅವುಗಳನ್ನು ಸರ್ಕಾರದ ಹಣಕಾಸು ಇಲಾಖೆಗೆ ಕಳುಹಿಸಿಕೊಡಬಹುದು.

**11. ಅನುದಾನ ಪಡೆಯುವ ಶಿಕ್ಷಣ ಸಂಸ್ಥೆಗಳ ನೌಕರರಿಗೆ ಮತ್ತು ವಿಶ್ವವಿದ್ಯಾಲಯಗಳ ಬೋಧಕೇತರ ಸಿಬ್ಬಂದಿಗೆ ಪರಿಷ್ಕೃತ ವೇತನ ಶ್ರೇಣಿಗಳ ಪ್ರಯೋಜನಗಳ ವಿಸ್ತರಣೆ:**

11.1 ಪರಿಷ್ಕೃತ ವೇತನ ಶ್ರೇಣಿಗಳ ಪ್ರಯೋಜನವನ್ನು ಅನುದಾನ ಪಡೆಯುವ ಶಿಕ್ಷಣ ಸಂಸ್ಥೆಗಳ ರಾಜ್ಯ ವೇತನ ಶ್ರೇಣಿಗಳಲ್ಲಿರುವ ನೌಕರರಿಗೆ ಹಾಗೂ ವಿಶ್ವವಿದ್ಯಾಲಯಗಳ ಬೋಧಕೇತರ ಸಿಬ್ಬಂದಿಗೆ ವಿಸ್ತರಿಸಲಾಗುವುದು. ಈ ಸಂಬಂಧದಲ್ಲಿ ಆದೇಶಗಳನ್ನು ಸಂಬಂಧಪಟ್ಟ ಸಂಸ್ಥೆಗಳ ಆಡಳಿತ ಇಲಾಖೆಗಳು ಪ್ರತ್ಯೇಕವಾಗಿ ಹೊರಡಿಸುತ್ತವೆ.

11.2 ಸ್ಥಳೀಯ ಸಂಸ್ಥೆಗಳ (ಪಟ್ಟಣ ಪಂಚಾಯಿತಿ/ಪಟ್ಟಣ ಪುರಸಭೆ/ನಗರಸಭೆ/ಮಹಾನಗರ ಪಾಲಿಕೆಗಳು) ನೌಕರರಿಗೆ ಪರಿಷ್ಕೃತ ವೇತನ ಶ್ರೇಣಿಗಳ ಸೌಲಭ್ಯವನ್ನು ವಿಸ್ತರಿಸುವ ಕುರಿತು ನಗರಾಭಿವೃದ್ಧಿ ಇಲಾಖೆಯು ಆಯಾ ಸ್ಥಳೀಯ ಸಂಸ್ಥೆಗಳ ಆರ್ಥಿಕ ಸ್ಥಿತಿಯನ್ನು ಪರಿಗಣಿಸಿ ನಿರ್ಧರಿಸುವುದು.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ**
**ಮತ್ತು ಅವರ ಹೆಸರಿನಲ್ಲಿ,**

**(ಎಂ.ಆರ್.ಕಾಂಬಳೆ)**
**ಸರ್ಕಾರದ ಕಾರ್ಯದರ್ಶಿ (ವೆಚ್ಚ)**
**ಆರ್ಥಿಕ ಇಲಾಖೆ**

## ಸರ್ಕಾರಿ ಆದೇಶ ಸಂಖ್ಯೆ:ಆಇ 8 ಎಸ್‌ಆರ್‌ಪಿ 2007, ದಿನಾಂಕ 16ನೇ ಮೇ 2007ರ ಅನುಬಂಧ-I

### ಉದಾಹರಣೆ – 1

### ವಿವರಗಳು

| | |
|---|---|
| 1. 2005ನೇ ಜುಲೈ 1 ನೇಯ ದಿನಾಂಕದಂದು ಧಾರಣ ಮಾಡಿದ ಹುದ್ದೆಯ ಪದನಾಮ | ಕಿರಿಯ ಸಹಾಯಕರು |
| 2. ಪ್ರಸಕ್ತ ವೇತನ ಶ್ರೇಣಿ | ರೂ.3000–75–3450–100–4450–125–5450 |
| 3. 2005ನೇ ಜುಲೈ 1 ರಂದು ಇದ್ದಂತೆ ಪ್ರಸಕ್ತ ವೇತನ ಶ್ರೇಣಿಯ ಮೂಲ ವೇತನ | ರೂ.3,450/– |
| 4. ಪ್ರಸಕ್ತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ | 1ನೇ ಜನವರಿ 2006 |

### ಪರಿಷ್ಕೃತ ಶ್ರೇಣಿಯಲ್ಲಿ ವೇತನ ನಿಗದಿ

| | |
|---|---|
| 1. ಹುದ್ದೆಗೆ ಅನ್ವಯವಾಗುವ ಪರಿಷ್ಕೃತ ವೇತನ ಶ್ರೇಣಿ | ರೂ.5800–100–6000–125–6500–150–7100–175–7800–200–8600–225–9500–250–10500 |
| 2. 2005ನೇ ಜುಲೈ 1 ರಿಂದ ಜಾರಿಗೆ ಬರುವಂತೆ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಕಾಲ್ಪನಿಕವಾಗಿ ನಿಗದಿಪಡಿಸಬೇಕಾದ ಮೂಲ ವೇತನ | ರೂ.6,650/– |
| 3. ಪರಿಷ್ಕೃತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ – 2007ರ ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳ ನಿಯಮ 8(1) ರನ್ವಯ | 1ನೇ ಜನವರಿ 2006 |

## ಉದಾಹರಣೆ – 2

## ವಿವರಗಳು

| | |
|---|---|
| 1. 2005ನೇ ಜುಲೈ 1 ನೇಯ ದಿನಾಂಕದಂದು ಧಾರಣ ಮಾಡಿದ ಹುದ್ದೆಯ ಪದನಾಮ | ಅರಣ್ಯ ರಕ್ಷಕ |
| 2. ಪ್ರಸಕ್ತ ವೇತನ ಶ್ರೇಣಿ | ರೂ.3000–75–3450–100–4450–125–5450 |
| 3. 2005ನೇ ಜುಲೈ 1 ರಂದು ಇದ್ದಂತೆ ಪ್ರಸಕ್ತ ವೇತನ ಶ್ರೇಣಿಯ ಮೂಲ ವೇತನ | ರೂ.3,375/– |
| 4. ಪ್ರಸಕ್ತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ | 1ನೇ ಡಿಸೆಂಬರ್ 2005 |

## ಪರಿಷ್ಕೃತ ಶ್ರೇಣಿಯಲ್ಲಿ ವೇತನ ನಿಗದಿ

| | |
|---|---|
| 1. ಹುದ್ದೆಗೆ ಅನ್ವಯವಾಗುವ ಪರಿಷ್ಕೃತ ವೇತನ ಶ್ರೇಣಿ | ರೂ.5800–100–6000–125–6500–150–7100–175–7800–200–8600–225–9500–250–10500 |
| 2. 2005ನೇ ಜುಲೈ 1 ರಿಂದ ಜಾರಿಗೆ ಬರುವಂತೆ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಕಾಲ್ಪನಿಕವಾಗಿ ನಿಗದಿಪಡಿಸಬೇಕಾದ ಮೂಲ ವೇತನ | ರೂ.6,375/– |
| 3. ಪ್ರಸಕ್ತ ವೇತನ ಶ್ರೇಣಿಯಲ್ಲಿ 2005ರ ಡಿಸೆಂಬರ್ 1 ರಂದು ಲಭ್ಯವಿದ್ದ ವೇತನ ಬಡ್ತಿಯನ್ನು (ರೂ.3450/–) ಆಧರಿಸಿ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಕಾಲ್ಪನಿಕವಾಗಿ 2007ರ ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳ ನಿಯಮ 8(1)ರ ಪರಂತುಕದನ್ವಯ ಪುನರ್ ನಿಗದಿಪಡಿಸಬೇಕಾದ ವೇತನ | ರೂ.6,650/– |
| 4. ಪರಿಷ್ಕೃತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ – 2007ರ ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳ ನಿಯಮ 8(2) ರನ್ವಯ | 1ನೇ ಡಿಸೆಂಬರ್ 2006 |

## ಉದಾಹರಣೆ – 3

### ವಿವರಗಳು

| | |
|---|---|
| 1. 2005ನೇ ಜುಲೈ 1 ನೇಯ ದಿನಾಂಕದಂದು ಧಾರಣ ಮಾಡಿದ ಹುದ್ದೆಯ ಪದನಾಮ | **ಪ್ರಥಮ ದರ್ಜೆ ಸಹಾಯಕ** |
| 2. ಪ್ರಸಕ್ತ ವೇತನ ಶ್ರೇಣಿ | ರೂ.3850–100–4450–125–5700–150–7050 |
| 3. 2005ನೇ ಜುಲೈ 1 ರಂದು ಇದ್ದಂತೆ ಪ್ರಸಕ್ತ ವೇತನ ಶ್ರೇಣಿಯ ಮೂಲ ವೇತನ | ರೂ.4,825/- |
| 4. ಪ್ರಸಕ್ತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ | 1ನೇ ಜುಲೈ 2006 |

### ಪರಿಷ್ಕೃತ ಶ್ರೇಣಿಯಲ್ಲಿ ವೇತನ ನಿಗದಿ

| | |
|---|---|
| 1. ಹುದ್ದೆಗೆ ಅನ್ವಯವಾಗುವ ಪರಿಷ್ಕೃತ ವೇತನ ಶ್ರೇಣಿ | ರೂ.7275–175–7800–200–8600–225–9500–250–10500–300–12300–350–13350 |
| 2. 2005ನೇ ಜುಲೈ 1 ರಿಂದ ಜಾರಿಗೆ ಬರುವಂತೆ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಕಾಲ್ಪನಿಕವಾಗಿ ನಿಗದಿಪಡಿಸಬೇಕಾದ ಮೂಲ ವೇತನ | ರೂ.9,275/- |
| 3. ಪರಿಷ್ಕೃತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ – 2007ರ ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳ ನಿಯಮ 8(1) ರನ್ವಯ | 1ನೇ ಜುಲೈ 2006 |

## ಉದಾಹರಣೆ – 4

### ವಿವರಗಳು

| | |
|---|---|
| 1. 2005ನೇ ಜುಲೈ 1 ನೇಯ ದಿನಾಂಕದಂದು ಧಾರಣ ಮಾಡಿದ ಹುದ್ದೆಯ ಪದನಾಮ | ಕಿರಿಯ ಅಭಿಯಂತರರು (ಲೋಕೋಪಯೋಗಿ ಇಲಾಖೆ) |
| 2. ಪ್ರಸಕ್ತ ವೇತನ ಶ್ರೇಣಿ | ರೂ.4575–125–5700–150–7200–200–8400 |
| 3. 2004ನೇ ಮೇ 1 ರಿಂದ ಜಾರಿಗೆ ಬರುವಂತೆ ಕಾಲಬದ್ಧ ಬಡ್ತಿ ಯೋಜನೆ ಮೇರೆಗೆ ಅನುಮತಿಸಲಾದ ಪ್ರಸಕ್ತ ಆಯ್ಕೆಕಾಲಿಕ ವೇತನ ಶ್ರೇಣಿ | ರೂ.5200–125–5700–150–7200–200–8800–260–9580 |
| 4. 2005ನೇ ಜುಲೈ 1 ರಂದು ಇದ್ದಂತೆ ಆಯ್ಕೆಕಾಲಿಕ ವೇತನ ಶ್ರೇಣಿಯಲ್ಲಿ ಪಡೆದ ಮೂಲ ವೇತನ | ರೂ.6,000/- |
| 5. ಪ್ರಸಕ್ತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ | 1ನೇ ಜನವರಿ 2006 |

### ಪರಿಷ್ಕೃತ ಶ್ರೇಣಿಯಲ್ಲಿ ವೇತನ ನಿಗದಿ

| | |
|---|---|
| 1. ಹುದ್ದೆಗೆ ಅನ್ವಯವಾಗುವ ಪರಿಷ್ಕೃತ ವೇತನ ಶ್ರೇಣಿ | ರೂ.8825–225–9500–250–10500–300–12300–350–14400–400–16000 |
| 2. ಪರಿಷ್ಕೃತ ವೇತನ ಶ್ರೇಣಗಳಲ್ಲಿ ಆಯ್ಕೆಕಾಲಿಕ ವೇತನ ಶ್ರೇಣಿ | ರೂ.10000–250–10500–300–12300–350–14400–400–16800–450–18150 |
| 3. 2005ನೇ ಜುಲೈ 1 ರಿಂದ ಜಾರಿಗೆ ಬರುವಂತೆ ಪರಿಷ್ಕೃತ ಆಯ್ಕೆಕಾಲಿಕ ವೇತನ ಶ್ರೇಣಿಯಲ್ಲಿ ಕಾಲ್ಪನಿಕವಾಗಿ ನಿಗದಿಪಡಿಸಬೇಕಾದ ವೇತನ | ರೂ.11,400/- |
| 4. ಪರಿಷ್ಕೃತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ – 2007ರ ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳ ನಿಯಮ 8(1) ರನ್ವಯ | 1ನೇ ಜನವರಿ 2006 |

## ಉದಾಹರಣೆ – 5

## ವಿವರಗಳು

| | |
|---|---|
| 1. 2005ನೇ ಜುಲೈ 1 ನೇಯ ದಿನಾಂಕದಂದು ಧಾರಣ ಮಾಡಿದ ಹುದ್ದೆಯ ಪದನಾಮ | **ಸಹಾಯಕ ಅಭಿಯಂತರು** (ಲೋಕೋಪಯೋಗಿ ಇಲಾಖೆ) |
| 2. ಪ್ರಸಕ್ತ ವೇತನ ಶ್ರೇಣಿ | ರೂ.6000–150–7200–200–8800–260–10880–320–11200 |
| 3. 2005ನೇ ಜುಲೈ 1 ರಂದು ಇದ್ದಂತೆ ಪ್ರಸಕ್ತ ವೇತನ ಶ್ರೇಣಿಯ ಮೂಲ ವೇತನ | ರೂ.10,100/- |
| 4. ಪ್ರಸಕ್ತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ | 1ನೇ ಏಪ್ರಿಲ್ 2006 |

## ಪರಿಷ್ಕೃತ ಶ್ರೇಣಿಯಲ್ಲಿ ವೇತನ ನಿಗದಿ

| | |
|---|---|
| 1. ಹುದ್ದೆಗೆ ಅನ್ವಯವಾಗುವ ಪರಿಷ್ಕೃತ ವೇತನ ಶ್ರೇಣಿ | ರೂ.11400–300–12300–350–14400–400–16800–450–19500–525–21600 |
| 2. 2005ನೇ ಜುಲೈ 1 ರಿಂದ ಜಾರಿಗೆ ಬರುವಂತೆ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಕಾಲ್ಪನಿಕವಾಗಿ ನಿಗದಿಪಡಿಸಬೇಕಾದ ಮೂಲ ವೇತನ | ರೂ.19,050/- |
| 3. ಪ್ರಸಕ್ತ ವೇತನ ಶ್ರೇಣಿಯಲ್ಲಿ 2006ನೇ ಏಪ್ರಿಲ್ 1 ರಂದು ಲಭ್ಯವಿದ್ದ ವೇತನ ಬಡ್ತಿಯನ್ನು (ರೂ.10360/-) ಆಧರಿಸಿ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಪುನರ್ ನಿಗದಿಪಡಿಸಬೇಕಾದ ವೇತನ – 2007ರ ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳ ನಿಯಮ 8(1)ರ ಪರಂತುಕದನ್ವಯ | ರೂ.20,025/- |
| 4. ಪರಿಷ್ಕೃತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ – 2007ರ ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳ ನಿಯಮ 8(2)ರನ್ವಯ | 1ನೇ ಏಪ್ರಿಲ್ 2007 |

## ಉದಾಹರಣೆ – 6

## ವಿವರಗಳು

| | |
|---|---|
| 1. 2005ನೇ ಜುಲೈ 1 ನೇಯ ದಿನಾಂಕದಂದು ಧಾರಣ ಮಾಡಿದ ಹುದ್ದೆಯ ಪದನಾಮ | ಪಶುವೈದ್ಯಾಧಿಕಾರಿ |
| 2. ಪ್ರಸಕ್ತ ವೇತನ ಶ್ರೇಣಿ | ರೂ.6300–150–7200–200–8800–260–10880–320–11840 |
| 3. 2005ನೇ ಜುಲೈ 1 ರಂದು ಇದ್ದಂತೆ ಪ್ರಸಕ್ತ ವೇತನ ಶ್ರೇಣಿಯ ಮೂಲ ವೇತನ | ರೂ.11,840/– + 320/– ವೈಯಕ್ತಿಕ ವೇತನ (1ನೇ ಸ್ಥಗಿತ ವೇತನ ಬಡ್ತಿ) |
| 4. ಪ್ರಸಕ್ತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ | ಪ್ರಸಕ್ತ ವೇತನ ಶ್ರೇಣಿಯಲ್ಲಿ ಯಾವುದೇ ವೇತನ ಬಡ್ತಿ ಇಲ್ಲ. ಆದರೆ, 2006ರ ಜನವರಿ 1 ರಂದು 2ನೇ ಸ್ಥಗಿತ ವೇತನ ಬಡ್ತಿಗೆ ಅರ್ಹತೆ ಇದೆ. |

## ಪರಿಷ್ಕೃತ ಶ್ರೇಣಿಯಲ್ಲಿ ವೇತನ ನಿಗದಿ

| | |
|---|---|
| 1. ಹುದ್ದೆಗೆ ಅನ್ವಯವಾಗುವ ಪರಿಷ್ಕೃತ ವೇತನ ಶ್ರೇಣಿ | ರೂ.12000–300–12300–350–14400–400–16800–450–19500–525–22650 |
| 2. 2005ನೇ ಜುಲೈ 1 ರಿಂದ ಜಾರಿಗೆ ಬರುವಂತೆ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಕಾಲ್ಪನಿಕವಾಗಿ ನಿಗದಿಪಡಿಸಬೇಕಾದ ಮೂಲ ವೇತನ | ರೂ.22,650/– + 600/– ವೈಯಕ್ತಿಕ ವೇತನ |
| 3. ಪ್ರಸಕ್ತ ವೇತನ ಶ್ರೇಣಿಯಲ್ಲಿ 2006ನೇ ಜನವರಿ 1 ರಂದು ಲಭ್ಯವಿದ್ದ 2ನೇ ಸ್ಥಗಿತ ವೇತನ ಬಡ್ತಿಯನ್ನು ಆಧರಿಸಿ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಕಾಲ್ಪನಿಕವಾಗಿ ಪುನರ್ ನಿಗದಿಪಡಿಸಬೇಕಾದ ಮೂಲ ವೇತನ – 2007ರ ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳ ನಿಯಮ 8(1)ರ ಪರಂತುಕದನ್ವಯ | ರೂ.22,650/– + 1,200/– ವೈಯಕ್ತಿಕ ವೇತನ |
| 4. ಪರಿಷ್ಕೃತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ | ಪರಿಷ್ಕೃತ ವೇತನ ಶ್ರೇಣಿಯಲ್ಲಿ ಯಾವುದೇ ವೇತನ ಬಡ್ತಿ ಇಲ್ಲ. ಆದರೆ, 2007ರ ಜನವರಿ 1 ರಂದು 3ನೇ ಸ್ಥಗಿತ ವೇತನ ಬಡ್ತಿಗೆ ಅರ್ಹತೆ ಇದೆ. |

## ಉದಾಹರಣೆ – 7

### ವಿವರಗಳು

| | |
|---|---|
| 1. 2005ನೇ ಜುಲೈ 1 ನೇಯ ದಿನಾಂಕದಂದು ಧಾರಣ ಮಾಡಿದ ಹುದ್ದೆಯ ಪದನಾಮ | ಜಮೇದಾರ್ |
| 2. ಪ್ರಸಕ್ತ ವೇತನ ಶ್ರೇಣಿ | ರೂ.2775–75–3450–100–4450–125–4950 |
| 3. 2005ನೇ ಜುಲೈ 1 ರಂದು ಇದ್ದಂತೆ ಪ್ರಸಕ್ತ ವೇತನ ಶ್ರೇಣಿಯಲ್ಲಿ ಪಡೆದ ಮೂಲ ವೇತನ | ರೂ.4950/– (1–4–2005 ರಂದು ವೇತನ ಶ್ರೇಣಿಯ ಗರಿಷ್ಠ ತಲುಪಿರುತ್ತಾರೆ) |
| 4. ಪ್ರಸಕ್ತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ | ಪ್ರಸಕ್ತ ವೇತನ ಶ್ರೇಣಿಯಲ್ಲಿ ಯಾವುದೇ ವೇತನ ಬಡ್ತಿ ಇಲ್ಲ. ಆದರೆ, 1–4–2006 ರಂದು ಮೊದಲನೇ ಸ್ಥಗಿತ ವೇತನ ಬಡ್ತಿಗೆ ಅರ್ಹತೆ ಇದೆ. |

### ಪರಿಷ್ಕೃತ ಶ್ರೇಣಿಯಲ್ಲಿ ವೇತನ ನಿಗದಿ

| | |
|---|---|
| 1. ಹುದ್ದೆಗೆ ಅನ್ವಯವಾಗುವ ಪರಿಷ್ಕೃತ ವೇತನ ಶ್ರೇಣಿ | ರೂ.5500–100–6000–125–6500–150–7100–175–7800–200–8600–225–9500 |
| 2. 2005ನೇ ಜುಲೈ 1 ರಿಂದ ಜಾರಿಗೆ ಬರುವಂತೆ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಕಾಲ್ಪನಿಕವಾಗಿ ನಿಗದಿಪಡಿಸಬೇಕಾದ ಮೂಲ ವೇತನ | ರೂ.9,500/– |
| 3. ಪ್ರಸಕ್ತ ವೇತನ ಶ್ರೇಣಿಯಲ್ಲಿ 2006ನೇ ಏಪ್ರಿಲ್ 1 ರಂದು ಲಭ್ಯವಿದ್ದ ಮೊದಲನೇ ಸ್ಥಗಿತ ವೇತನ ಬಡ್ತಿಯನ್ನು (ರೂ.4,950/– + 125/–) ಆಧರಿಸಿ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಪುನರ್ ನಿಗದಿಪಡಿಸಬೇಕಾದ ವೇತನ – 2007ರ ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳ ನಿಯಮ 8(1)ರ ಪರಂತುಕದನ್ವಯ | ರೂ.9,500/– + 250/– ವೈಯಕ್ತಿಕ ವೇತನ |
| 4. ಪರಿಷ್ಕೃತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ | ಪರಿಷ್ಕೃತ ವೇತನ ಶ್ರೇಣಿಯಲ್ಲಿ ಯಾವುದೇ ವೇತನ ಬಡ್ತಿ ಇಲ್ಲ. ಆದರೆ, 1–4–2007 ರಂದು 2ನೇ ಸ್ಥಗಿತ ವೇತನ ಬಡ್ತಿಗೆ ಅರ್ಹತೆ ಇದೆ. |

## ಉದಾಹರಣೆ – ೮

## ವಿವರಗಳು

| | |
|---|---|
| 1. 2005ನೇ ಜುಲೈ 1 ನೇಯ ದಿನಾಂಕದಂದು ಧಾರಣ ಮಾಡಿದ ಹುದ್ದೆಯ ಪದನಾಮ | ಪ್ರಥಮ ದರ್ಜೆ ಸಹಾಯಕ |
| 2. ಪ್ರಸಕ್ತ ವೇತನ ಶ್ರೇಣಿ | 1999ರ ವೇತನ ಶ್ರೇಣಿ ರೂ.3850–100–4450–125–5700–150–7050 ರಲ್ಲಿ ದಿನಾಂಕ 1–7–2005 ರಂದು ನೇಮಕಗೊಂಡಿರುತ್ತಾರೆ |
| 3. 2005ನೇ ಜುಲೈ 1 ರಂದು ಇದ್ದಂತೆ ಪ್ರಸಕ್ತ ವೇತನ ಶ್ರೇಣಿಯ ಮೂಲ ವೇತನ | ರೂ.3,850/– |
| 4. ಪ್ರಸಕ್ತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ | 1ನೇ ಜುಲೈ 2006 |

## ಪರಿಷ್ಕೃತ ಶ್ರೇಣಿಯಲ್ಲಿ ವೇತನ ನಿಗದಿ

| | |
|---|---|
| 1. ಹುದ್ದೆಗೆ ಅನ್ವಯವಾಗುವ ಪರಿಷ್ಕೃತ ವೇತನ ಶ್ರೇಣಿ | ರೂ.7275–175–7800–200–8600–225–9500–250–10500–300–12300–350–13350 |
| 2. 2005ನೇ ಜುಲೈ 1 ರಿಂದ ಜಾರಿಗೆ ಬರುವಂತೆ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಕಾಲ್ಪನಿಕವಾಗಿ ನಿಗದಿಪಡಿಸಬೇಕಾದ ಮೂಲ ವೇತನ | ರೂ.7,275/– |
| 3. ಪರಿಷ್ಕೃತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ | 1ನೇ ಜುಲೈ 2006 |

## ಉದಾಹರಣೆ – ೯

### ವಿವರಗಳು

| | |
|---|---|
| 1. 2005ನೇ ಜುಲೈ 1 ನೇಯ ದಿನಾಂಕದಂದು ಧಾರಣ ಮಾಡಿದ ಹುದ್ದೆಯ ಪದನಾಮ | ಅಪರ ಕಾರ್ಯದರ್ಶಿ |
| 2. ಪ್ರಸಕ್ತ ವೇತನ ಶ್ರೇಣಿ | ರೂ.13820–380–14960–440–16720–500–17220 |
| 3. 2005ನೇ ಜುಲೈ 1 ರಂದು ಇದ್ದಂತೆ ಮೂಲ ವೇತನ | ರೂ.17,220/– |
| 4. ಪ್ರಸಕ್ತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ | ಪ್ರಸಕ್ತ ವೇತನ ಶ್ರೇಣಿಯಲ್ಲಿ ಯಾವುದೇ ವೇತನ ಬಡ್ತಿ ಇಲ್ಲ. ದಿನಾಂಕ 1–1–2006 ರಂದು ಮೊದಲನೇ ಸ್ಥಗಿತ ವೇತನ ಬಡ್ತಿಗೆ ಅರ್ಹತೆ ಇದೆ. |

### ಪರಿಷ್ಕೃತ ಶ್ರೇಣಿಯಲ್ಲಿ ವೇತನ ನಿಗದಿ

| | |
|---|---|
| 1. ಹುದ್ದೆಗೆ ಅನ್ವಯವಾಗುವ ಪರಿಷ್ಕೃತ ವೇತನ ಶ್ರೇಣಿ | ರೂ.26250–675–30300–750–34800–850–36500 |
| 2. 2005ನೇ ಜುಲೈ 1 ರಿಂದ ಜಾರಿಗೆ ಬರುವಂತೆ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಕಾಲ್ಪನಿಕವಾಗಿ ನಿಗದಿಪಡಿಸಬೇಕಾದ ಮೂಲ ವೇತನ | ರೂ.32,550/– |
| 3. ಪ್ರಸಕ್ತ ವೇತನ ಶ್ರೇಣಿಯಲ್ಲಿ 2006ನೇ ಜನವರಿ 1 ರಂದು ಲಭ್ಯವಿದ್ದ ಮೊದಲನೇ ಸ್ಥಗಿತ ವೇತನ ಬಡ್ತಿಯನ್ನು (ರೂ.17,220+500) ಆಧರಿಸಿ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಪುನರ್ ನಿಗದಿಪಡಿಸಬೇಕಾದ ವೇತನ – 2007ರ ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳ ನಿಯಮ 8(1)ರ ಪರಂತುಕದನ್ವಯ | ರೂ.34,050/– |
| 4. ಪರಿಷ್ಕೃತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ – 2007ರ ಕರ್ನಾಟಕ ನಾಗರೀಕ ಸೇವಾ (ಪರಿಷ್ಕೃತ ವೇತನ) ನಿಯಮಗಳ ನಿಯಮ 8(2)ರನ್ವಯ | 1ನೇ ಜನವರಿ 2007 |

## ಉದಾಹರಣೆ – 10

### ವಿವರಗಳು

| | |
|---|---|
| 1. 2005ನೇ ಜುಲೈ 1ನೇಯ ದಿನಾಂಕದಂದು ಧಾರಣ ಮಾಡಿದ ಹುದ್ದೆಯ ಪದನಾಮ | ಕೃಷಿ ನಿರ್ದೇಶಕರು |
| 2. ಪ್ರಸಕ್ತ ವೇತನ ಶ್ರೇಣಿ | ರೂ.13820–380–14960–440–16720–500–17220 |
| 3. 2005ನೇ ಜುಲೈ 1 ರಂದು ಇದ್ದಂತೆ ಪ್ರಸಕ್ತ ವೇತನ ಶ್ರೇಣಿಯಲ್ಲಿ ಮೂಲ ವೇತನ | ರೂ.17,220/– + 500/– ವೈಯಕ್ತಿಕ ವೇತನ (ಮೊದಲನೇ ಸ್ಥಗಿತ ವೇತನ ಬಡ್ತಿ) |
| 4. ಪ್ರಸಕ್ತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ | ಪ್ರಸಕ್ತ ವೇತನ ಶ್ರೇಣಿಯಲ್ಲಿ ಯಾವುದೇ ವೇತನ ಬಡ್ತಿ ಇಲ್ಲ. ದಿನಾಂಕ 1–7–2006 ರಂದು ಎರಡನೇ ಸ್ಥಗಿತ ವೇತನ ಬಡ್ತಿಗೆ ಅರ್ಹತೆ ಇದೆ. |

### ಪರಿಷ್ಕೃತ ಶ್ರೇಣಿಯಲ್ಲಿ ವೇತನ ನಿಗದಿ

| | |
|---|---|
| 1. ಹುದ್ದೆಗೆ ಅನ್ವಯವಾಗುವ ಪರಿಷ್ಕೃತ ವೇತನ ಶ್ರೇಣಿ | ರೂ.26250–675–30300–750–34800–850–36500 |
| 2. 2005ನೇ ಜುಲೈ 1 ರಿಂದ ಜಾರಿಗೆ ಬರುವಂತೆ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಕಾಲ್ಪನಿಕವಾಗಿ ನಿಗದಿಪಡಿಸಬೇಕಾದ ಮೂಲ ವೇತನ | ರೂ.34,050/– |
| 3. ಪರಿಷ್ಕೃತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ | 1ನೇ ಜುಲೈ 2006 (1ನೇ ಜುಲೈ 2006 ರಂದು ಲಭ್ಯವಿದ್ದ ವಾರ್ಷಿಕ ವೇತನ ಬಡ್ತಿಯಿಂದಾಗಿ, ವೇತನವು ರೂ.34,800/–ಗಳಿಗೆ ಏರುತ್ತದೆ) |

## ಉದಾಹರಣೆ – 11

### ವಿವರಗಳು

1999ರ ರೂ.6000–150–7200–200–8800–260–10880–320–11200ರ ವೇತನ ಶ್ರೇಣಿಯಲ್ಲಿ ರೂ.10,100/- ಮೂಲ ವೇತನ ಪಡೆಯುತ್ತಿದ್ದ ಶ್ರೀಮತಿ "ಎ" ಶಾಖಾಧಿಕಾರಿಯವರಿಗೆ 1999ರ ರೂ.7400–200–8800–260–10880–320–13120ರ ವೇತನ ಶ್ರೇಣಿಯಲ್ಲಿ 2005ನೇ ಜೂನ್ 1 ರಿಂದ ಜಾರಿಗೆ ಬರುವಂತೆ ಅಧೀನ ಕಾರ್ಯದರ್ಶಿ ಹುದ್ದೆಗೆ ಬಡ್ತಿ ನೀಡಲಾಯಿತು. ಬಡ್ತಿ ನೀಡಿದ ಮೇಲೆ ಅವರ ವೇತನವನ್ನು 2005ನೇ ಜೂನ್ 1 ರಿಂದ ರೂ.10,360/-ಕ್ಕೆ ನಿಗದಿಪಡಿಸಲಾಯಿತು. ಅವರ ಕೆಳಗಿನ ಹುದ್ದೆಯಾದ ಶಾಖಾದಿಕಾರಿ ಹುದ್ದೆಯಲ್ಲಿ ಅವರ ಮುಂದಿನ ವೇತನ ಬಡ್ತಿ 2006ರ ಏಪ್ರಿಲ್ ಒಂದರಂದು ದೊರೆಯಬೇಕಾಗಿತ್ತು.

| | |
|---|---|
| 1. 2005ನೇ ಜುಲೈ 1 ರಂದು ಧಾರಣ ಮಾಡಿದ್ದ ಹುದ್ದೆಯ ಪದನಾಮ | **ಅಧೀನ ಕಾರ್ಯದರ್ಶಿ** |
| 2. 2005ನೇ ಜುಲೈ 1 ರಂದು ಧಾರಣ ಮಾಡಿದ್ದ ಹುದ್ದೆಗೆ ಅನ್ವಯವಾಗುವ ಪ್ರಸಕ್ತ ವೇತನ ಶ್ರೇಣಿ | ರೂ.7400–200–8800–260–10880–320–13120 |
| 3. 2005ನೇ ಜುಲೈ 1 ರಂದು ಇದ್ದಂತೆ ಅಧೀನ ಕಾರ್ಯದರ್ಶಿ ಹುದ್ದೆಯ ಪ್ರಸಕ್ತ ವೇತನ ಶ್ರೇಣಿಯಲ್ಲಿ ಮೂಲ ವೇತನ | ರೂ.10,360/- |
| 4. 2005ನೇ ಜುಲೈ 1 ರಂದು ಧಾರಣ ಮಾಡಿದ್ದ ಅಧೀನ ಕಾರ್ಯದರ್ಶಿ ಹುದ್ದೆಗೆ ಅನ್ವಯವಾಗುವ ಪರಿಷ್ಕೃತ ವೇತನ ಶ್ರೇಣಿ | ರೂ.14050–350–14400–400–16800–450–19500–525–22650–600–25050 |
| 5. 2005ನೇ ಜುಲೈ 1 ರಿಂದ ಜಾರಿಗೆ ಬರುವಂತೆ ಅಧೀನ ಕಾರ್ಯದರ್ಶಿ ಹುದ್ದೆಗೆ ಅನ್ವಯವಾಗುವ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಕಾಲ್ಪನಿಕವಾಗಿ ನಿಗದಿಪಡಿಸಬೇಕಾದ ಮೂಲ ವೇತನ | ರೂ.20,025/- |
| 6. 2005ನೇ ಜುಲೈ 1 ರಿಂದ ಜಾರಿಗೆ ಬರುವಂತೆ ರೂ.10,100/- ಮೂಲ ವೇತನವನ್ನು ಆಧರಿಸಿ ಕೆಳಗಿನ ಹುದ್ದೆಯಾದ ಶಾಖಾಧಿಕಾರಿ ಹುದ್ದೆಗೆ ಅನ್ವಯವಾಗುವ ಪರಿಷ್ಕೃತ ವೇತನ ಶ್ರೇಣಿ ರೂ.11400–300–12300–350–14400–400–16800–450–19500–525–21600ರಲ್ಲಿ ಕಾಲ್ಪನಿಕವಾಗಿ ನಿಗದಿಪಡಿಸಬೇಕಾದ ಮೂಲ ವೇತನ | ರೂ.19,050/- |
| 7. ಪ್ರಸಕ್ತ ವೇತನ ಶ್ರೇಣಿಯಲ್ಲಿ 2006ನೇ ಏಪ್ರಿಲ್ 1 ರಂದು ಲಭ್ಯವಿದ್ದ ವಾರ್ಷಿಕ ವೇತನ ಬಡ್ತಿಯನ್ನು (ರೂ.10,360/-) ಆಧರಿಸಿ, ಕೆಳಗಿನ ಹುದ್ದೆಯಾದ ಶಾಖಾಧಿಕಾರಿ ಹುದ್ದೆಯ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಪುನರ್ ನಿಗದಿಪಡಿಸಬೇಕಾದ ವೇತನ – 2007ರ | ರೂ.20,025/- |

| | |
|---|---|
| ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳ ನಿಯಮ 8(1)ರ ಪರಂತುಕದನ್ವಯ | |
| 8. ಕೆಳಗಿನ ಹುದ್ದೆಯಾದ ಶಾಖಾಧಿಕಾರಿ ಹುದ್ದೆಯಲ್ಲಿ 2006ನೇ ಏಪ್ರಿಲ್ 1 ರಂದು ಲಭ್ಯವಿದ್ದ ವಾರ್ಷಿಕ ವೇತನ ಬಡ್ತಿಯನ್ನು ಆಧರಿಸಿ ಅಧೀನ ಕಾರ್ಯದರ್ಶಿ ಹುದ್ದೆಯ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಪುನರ್ ನಿಗದಿಪಡಿಸಬೇಕಾದ ವೇತನ – ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಯ ನಿಯಮ 42ಬಿ(2) ರನ್ವಯ | ರೂ.20,550/– |
| 9. ಪರಿಷ್ಕೃತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿ | 1ನೇ ಏಪ್ರಿಲ್ 2007 |

## ಉದಾಹರಣೆ – 12

## ವಿವರಗಳು

1999ರ ರೂ.2775–75–3450–100–4450–125–4950ರ ವೇತನ ಶ್ರೇಣಿಯಲ್ಲಿ ರೂ.3,550/– ಮೂಲ ವೇತನ ಪಡೆಯುತ್ತಿದ್ದ ಶ್ರೀ "ಬಿ", ಜಮೇದಾರ್ ಇವರಿಗೆ 2005ರ ನವೆಂಬರ್ 1ರಿಂದ ಜಾರಿಗೆ ಬರುವಂತೆ ರೂ.3000–75–3450–100–4450–125–5450ರ ಆಯ್ಕೆಕಾಲಿಕ ವೇತನ ಶ್ರೇಣಿಯನ್ನು ನೀಡಲಾಯಿತು. ರೂ.3000–5450ರ ಆಯ್ಕೆಕಾಲಿಕ ವೇತನ ಶ್ರೇಣಿಯಲ್ಲಿ ಅವರ ವೇತನವನ್ನು, 2005ನೇ ನವೆಂಬರ್ 1ರಿಂದ ಜಾರಿಗೆ ಬರುವಂತೆ ರೂ.3650/–ಗೆ ನಿಗದಿಪಡಿಸಲಾಯಿತು. ರೂ.2775–4950ರ ವೇತನ ಶ್ರೇಣಿಯಲ್ಲಿ ಅವರ ಮುಂದಿನ ವೇತನ ಬಡ್ತಿಯು ದಿನಾಂಕ 1–2–2006 ರಂದು ಲಭ್ಯವಿತ್ತು.

| | |
|---|---|
| 1. 2005ನೇ ಜುಲೈ 1 ರಂದು ಧಾರಣ ಮಾಡಿದ್ದ ಹುದ್ದೆಯ ಪ್ರಸಕ್ತ ವೇತನ ಶ್ರೇಣಿ | ರೂ.2775–75–3450–100–4450–125–4950 |
| 2. 2005ನೇ ಜುಲೈ 1 ರಂದು ಇದ್ದಂತೆ ಪ್ರಸಕ್ತ ವೇತನ ಶ್ರೇಣಿಯಲ್ಲಿ ಮೂಲ ವೇತನ | ರೂ.3,550/– |
| 3. 2005ನೇ ನವೆಂಬರ್ 1 ರಿಂದ ಜಾರಿಗೆ ಬರುವಂತೆ ರೂ.3000–5450ರ ಆಯ್ಕೆ ಕಾಲಿಕ ವೇತನ ಶ್ರೇಣಿಯಲ್ಲಿ ನಿಗದಿಪಡಿಸಲಾದ ವೇತನ | ರೂ.3,650/– |
| 4. ಪ್ರಸಕ್ತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ | 1ನೇ ಫೆಬ್ರವರಿ 2006 |

## ಪರಿಷ್ಕೃತ ಶ್ರೇಣಿಯಲ್ಲಿ ವೇತನ ನಿಗದಿ

| | |
|---|---|
| 1. ಹುದ್ದೆಗೆ ಅನ್ವಯವಾಗುವ ಪರಿಷ್ಕೃತ ವೇತನ ಶ್ರೇಣಿ | ರೂ.5500–100–6000–125–6500–150–7100–175–7800–200–8600–225–9500 |
| 2. 2005ನೇ ಜುಲೈ 1 ರಿಂದ ಜಾರಿಗೆ ಬರುವಂತೆ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಕಾಲ್ಪನಿಕವಾಗಿ ನಿಗದಿಪಡಿಸಬೇಕಾದ ಮೂಲ ವೇತನ | ರೂ.6,800/– |
| 3. ಪರಿಷ್ಕೃತ ವೇತನ ಶ್ರೇಣಿಗಳಲ್ಲಿ ಅನ್ವಯುವಾಗುವ ಆಯ್ಕು ಕಾಲಿಕ ವೇತನ ಶ್ರೇಣಿ | ರೂ.5800–100–6000–125–6500–150–7100–175–7800–200–8600–225–9500–250–10500 |

| | |
|---|---|
| 4. 2005ನೇ ನವೆಂಬರ್ 1 ರಿಂದ ಜಾರಿಗೆ ಬರುವಂತೆ ರೂ.5800–10500ರ ಪರಿಷ್ಕೃತ ಆಯ್ಕೆಕಾಲಿಕ ವೇತನ ಶ್ರೇಣಿಯಲ್ಲಿ ಕಾಲ್ಪನಿಕವಾಗಿ ನಿಗದಿಪಡಿಸಬೇಕಾದ ವೇತನ – ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಯ ನಿಯಮ 42ಬಿ(1) ರನ್ವಯ | ರೂ.6,950/- |
| 5. 2006ನೇ ಫೆಬ್ರವರಿ 1 ರಿಂದ ಜಾರಿಗೆ ಬರುವಂತೆ ರೂ.5800–10500ರ ಪರಿಷ್ಕೃತ ಆಯ್ಕೆಕಾಲಿಕ ವೇತನ ಶ್ರೇಣಿಯಲ್ಲಿ ಕಾಲ್ಪನಿಕವಾಗಿ ಪುನರ್ ನಿಗದಿಮಾಡಬೇಕಾದ ವೇತನ – ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಯ ನಿಯಮ 42ಬಿ(2)ರನ್ವಯ | ರೂ.7,100/- |
| 6. ಪರಿಷ್ಕೃತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ | 1ನೇ ಫೆಬ್ರವರಿ 2007 |

## ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 8 ಎಸ್‌ಆರ್‌ಪಿ 2007 ದಿನಾಂಕ 16ನೇ ಮೇ 2007ರ ಅನುಬಂಧ – II

## ನಮೂನೆ

| ಸರ್ಕಾರಿ ನೌಕರನ ಹೆಸರು ಮತ್ತು 1-7-2005 ರಂದು ಧಾರಣ ಮಾಡಿದ್ದ ಹುದ್ದೆ | 1-7-2005 ರಂದು ಧಾರಣ ಮಾಡಿರುವ ಹುದ್ದೆಯ ಈಗಿನ ವೇತನ ಶ್ರೇಣಿ | 1-7-2005 ರಂದು ಪ್ರಸಕ್ತ ವೇತನ ಶ್ರೇಣಿಯಲ್ಲಿ ಪಡೆಯುತ್ತಿದ್ದ ವೇತನ | ಪ್ರಸಕ್ತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ | ಹುದ್ದೆಗೆ ಅನ್ವಯ-ವಾಗುವ ಪರಿಷ್ಕೃತ ವೇತನ ಶ್ರೇಣಿ | ಪ್ರಸಕ್ತ ವೇತನ ಶ್ರೇಣಿಯಲ್ಲಿ ಪಡೆಯುತ್ತಿರುವ ಮೂಲ ವೇತನಕ್ಕೆ ಸಂವಾದಿಯಾಗಿ ಪರಿಷ್ಕೃತ ವೇತನ ಶ್ರೇಣಿಯಲ್ಲಿ ನಿಗದಿಪಡಿಸಿದ ವೇತನ | 8(1) ನೇ ನಿಯಮದ ಪರಂತುಕದ ಮೇರೆಗೆ ವೇತನ ಪುನರ್ ನಿಗದಿಯು ಪ್ರಯೋಜನಕಾರಿಯೇ? ಮತ್ತು, ಹಾಗಿದ್ದರೆ, ಪುನರ್ ನಿಗದಿಪಡಿಸಿದ ವೇತನ ಮತ್ತು ಅಂತಹ ಪುನರ್ ನಿಗದಿಯ ದಿನಾಂಕ | ಪರಿಷ್ಕೃತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿ ದಿನಾಂಕ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| | | | | | | | |

ಟಿಪ್ಪಣಿ: ಸರ್ಕಾರಿ ನೌಕರನ ಪ್ರಾರಂಭಿಕ ವೇತನವನ್ನು –
(ಅ) ಅವನು ದಿನಾಂಕ 1ನೇ ಜುಲೈ 2005 ರಂದು ಧಾರಣ ಮಾಡಿದ್ದ ಹುದ್ದೆಯ ಸಂಬಂಧದಲ್ಲಿ; ಮತ್ತು
(ಆ) ಅವನು ಉನ್ನತ ಹುದ್ದೆಯನ್ನು ಸ್ಥಾನಪನ್ನವಾಗಿ ಧಾರಣ ಮಾಡಿರದ ಪಕ್ಷದಲ್ಲಿ ಆ ದಿನಾಂಕದಂದು ಅವನು ಧಾರಣ ಮಾಡಿರಬಹುದಾದಂಥ ಕೆಳಗಿನ ಹುದ್ದೆ, ಯಾವುದಾದರೂ ಇದ್ದರೆ, ಅದಕ್ಕೆ ಸಂಬಂಧಿಸಿದಂತೆ – ಪ್ರತ್ಯೇಕವಾಗಿ ನಿಗದಿಪಡಿಸತಕ್ಕದ್ದು.

ಸರ್ಕಾರಿ ಆದೇಶದ 5ನೇ ಪ್ಯಾರಾದಲ್ಲಿ
ನಮೂದಿಸಿದ ಪ್ರಾಧಿಕಾರದ ಸಹಿ.

ಪದನಾಮ _______________

ದಿನಾಂಕ _______________